80

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಟಿ. ರವಿ ರವರು ನಿಯಮ-330 ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 80ಕ್ಕೆ ಉತ್ತರ ಸಲ್ಲಿಸುವ ಕುರಿತು.**

**ಪ್ರಶ್ನೆ: ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕಳಸ ಹೋಬಳಿಯಲ್ಲಿರುವ ಪುರಾತನ ಶ್ರೀ ಕಲಶೇಶ್ವರ ಸ್ವಾಮಿ ದೇವಸ್ಥಾನಕ್ಕೆ 1512ರಲ್ಲಿ ಕಾರ್ಕಳ ಭೈರವರಸ ರಾಜರು ಮಾವಿನಕೆರೆ, ತಲಗೋಡು, ತೋಟದೂರು ಗ್ರಾಮಗಳಲ್ಲಿನ ಪೂರ್ಣ ಜಮೀನುಗಳನ್ನು ದಾನ ನೀಡಿದ್ದು, ದಾನ ನೀಡುವಾಗ ವಿಧಿಸಿದ್ದ ಷರತ್ತುಗಳಂತೆ ಈ ಜಮೀನುಗಳಿಂದ ಬರುವ ಆದಾಯದಿಂದ ಶ್ರೀ ದೇವರ ಪೂಜೆ, ಉತ್ಸವ, ಹೋಮ-ಹವನ, ರಥೋತ್ಸವ, ಗಿರಿಜಾ ಕಲ್ಯಾಣ ಮುಂತಾದ ಸೇವೆಗಳನ್ನು ನಡೆಸಿಕೊಂಡು ಬರಲಾಗಿದೆ. ಆದರೆ, ನಂತರದ ದಿನಗಳಲ್ಲಿ ಅರಣ್ಯ ಇಲಾಖೆಯವರು ದೇವಸ್ಥಾನಕ್ಕೆ ಸೇರಿದ 6777 ಎಕರೆ ಪ್ರದೇಶ ಅರಣ್ಯ ಇಲಾಖೆಗೆ ಸೇರಿದ್ದೆಂದು ಮಹಾರಾಜರು ಘೋಷಿಸಿದ್ದಾರೆಂದು ಹೇಳಲಾದ ಗೆಜೆಟನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ನ್ಯಾಯಾಲಯ ಗೆಜೆಟ್ ಅನುಸಾರ ಅರಣ್ಯ ಭೂಮಿ ಎಂದು 2012 ರಲ್ಲಿ ತೀರ್ಪು ನೀಡಿರುತ್ತದೆ. ನಂತರ ಉಚ್ಚ ನ್ಯಾಯಾಲಯ ಸಹ 2014 ರಲ್ಲಿ ಈ ಆದೇಶವನ್ನು ಎತ್ತಿ ಹಿಡಿದಿದೆ. ಉಚ್ಚ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ. (ಎನ್.ಪಿ. ಸುಂಗಂಧಿನಿ ಮತ್ತು ಇತರರ ಹೆಸರಿನಲ್ಲಿರುವ ಪ್ರಕರಣ ಸಂಖ್ಯೆ: ಎಸ್.ಎಲ್.ಪಿ (ಸಿವಿಲ್): 28571-28595/2014).**

ಶ್ರೀ ಕಲಶೇಶ್ವರ ದೇವಸ್ಥಾನಕ್ಕೆ ಸೇರಿದ ಈ ಭೂಮಿಯಲ್ಲಿ ಹಲವಾರು ವರ್ಷಗಳ ಹಿಂದೆಯೇ 330 ಕುಟುಂಬಗಳಿಗೆ ಅಂದಾಜು 750 ಎಕರೆ ಜಮೀನು ಮಂಜೂರು ಮಾಡಲಾಗಿದ್ದು, ಅಂದಾಜು 650 ಕುಟುಂಬಗಳು 1900 ಎಕರೆ ಒತ್ತುವರಿ ಸಾಗುವಳಿ ಮಾಡಿ ಮನೆ-ಮಠ ಮಾಡಿಕೊಂಡಿರುವುದು ಜೀವನ ಸಾಗಿಸುತ್ತಿದ್ದಾರೆ. ಅಲ್ಲದೆ, ಈ ಜಮೀನಿನಲ್ಲಿ ಕುದುರೆಮುಖ ಸಂಸ್ಥೆಗೆ 300 ಎಕರೆ ಹಂಚಿಕೆ ಮಾಡಲಾಗಿದೆ.

ಇವರೆಲ್ಲರ ಹಿತದೃಷ್ಟಿಯಿಂದ ಹಾಗೂ ಇವರನ್ನು ಒಕ್ಕಲೆಬ್ಬಿಸುವುದನ್ನು ತಡೆಯಲು ಹಿಂದಿನ ಸರ್ಕಾರದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಹಾಗೂ ಅರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಆದ ತೀರ್ಮಾನದಂತೆ ಅರಣ್ಯ ಮತ್ತು ಕಂದಾಯ ಇಲಾಖೆಯ ಜಂಟಿ ಸರ್ವೆ ನಡೆಸಿ, ಸದರಿ ಅರಣ್ಯ ಜಮೀನಿಗೆ ಬದಲಾಗಿ ಪರ್ಯಾಯ ಜಮೀನು ನೀಡಲು ತೀರ್ಮಾನವಾಗಿದ್ದು, ಅದರಂತೆ ಬದಲಿ ಜಮೀನು ನೀಡಲು ಒಪ್ಪಿರುವುದಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ತುರ್ತಾಗಿ ಸರ್ಕಾರವು ಪ್ರಮಾಣ ಪತ್ರ ಸಲ್ಲಿಸಬೇಕಾಗಿದೆ.

**ಉತ್ತರ:** ಶ್ರೀ ಕಳಸೇಶ್ವರ ಇನಾಂ ಲ್ಯಾಂಡ್‌ನ 05 ಅರಣ್ಯ ಬ್ಲಾಕ್‌ಗಳಲ್ಲಿ ಒಟ್ಟು 638 ಪ್ರಕರಣಗಳಿಂದ 2258.29 ಎಕರೆ ಒತ್ತುವರಿ ಮತ್ತು ಭೂ ಮಂಜೂರಾತಿ ಪ್ರಕರಣಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿರುತ್ತದೆ. ಸದರಿ 638 ಪ್ರಕರಣಗಳಲ್ಲಿ 03 ಪ್ರಕರಣಗಳಿಂದ 153.05 ಎಕರೆ ಒತ್ತುವರಿ ಪ್ರದೇಶವನ್ನು ಈಗಾಗಲೇ ತೆರವುಗೊಳಿಸಲಾಗಿರುತ್ತದೆ. ಬಾಕಿ ಉಳಿದ 635 ಪ್ರಕರಣಗಳಿಂದ 2105.24 ಎಕರೆ ಒತ್ತುವರಿ ಪ್ರದೇಶದಲ್ಲಿ ಒತ್ತುವರಿದಾರರು ಅನುಭವದಲ್ಲಿರುತ್ತಾರೆ. ವಿವರ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ | ಮೀಸಲು ಅರಣ್ಯ ಬ್ಲಾಕಿನ ಹೆಸರು | ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣ (ಎ-ಗುಂ) | ಒತ್ತುವರಿ / ಭೂ ಮಂಜೂರಿದಾರರ ಕುಟುಂಬ ಗಳ ಸಂಖ್ಯೆ. | ಒತ್ತುವರಿ ವಿಸ್ತೀರ್ಣ (ಎ-ಗುಂ) | ಇತರೆ ಸಾರ್ವಜನಿಕ ಉದ್ದೇಶಕ್ಕಾಗಿ ಒತ್ತುವರಿ/ ಭೂ ಮಂಜೂರಿ | ವಿಸ್ತೀರ್ಣ (ಎ-ಗುಂ) | ಒಟ್ಟು | ಒಟ್ಟು ವಿಸ್ತೀರ್ಣ (ಎ-ಗುಂ) |
|---|---|---|---|---|---|---|---|---|
| 1 | ದೇವರಬೆಟ್ಟ ಬ್ಲಾಕ್ | 649.00 | 139 | 382.36 | 5 | 10.12 | 144 | 393.08 |
| 2 | ಕರಿಮನೆ-ಕಲ್ಲೋಡು ಬ್ಲಾಕ್ | 1026.00 | 162 | 453.28 | 3 | 0.36 | 165 | 454.24 |
| 3 | ಮಾವಿನಕೆರೆ ತಲಗೋಡು | 1981.00 | 191 | 828.36 | 4 | 1.30 | 195 | 830.26 |
| 4 | ತೋಟದೂರು ಬ್ಲಾಕ್ | 660.00 | 64 | 196.25 | 3 | 0.21 | 67 | 197.06 |
| 5 | ಬಲಿಗೆ ಬ್ಲಾಕ್ | 2461.00 | 60 | 227.39 | 4 | 2.01 | 64 | 230.00 |
| | **ಒಟ್ಟು** | **6777** | **616** | **2087.64** | **19** | **15.20** | **635** | **2104.64** |

ಈ ಮೇಲ್ಕಂಡಂತೆ ಒತ್ತುವರಿ/ ಮಂಜೂರಾತಿಯಾದ 359 ಪ್ರಕರಗಳಿಂದ 1091.13 ಎಕರೆ ಅರಣ್ಯ ಭೂಮಿಗೆ ಅರಣ್ಯ ಸಂರಕ್ಷಣಾ ಕಾಯ್ದೆ-1980ರಡಿ ಪರಿಹಾರಾತ್ಮಕವಾಗಿ ಬದಲಿ ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಗೆ ಕಾಯ್ದಿರಿಸಲು ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರನ್ನು ಅರಣ್ಯ ಇಲಾಖೆಯಿಂದ ಕೋರಲಾಗಿರುತ್ತದೆ. **(ಪ್ರತಿಯನ್ನು ಲಗತ್ತಿಸಿದೆ)**

ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ ಇವರು ಪರಿಹಾರಾತ್ಮಕವಾಗಿ ಬದಲಿ ಕಂದಾಯ ಭೂಮಿಯನ್ನು ನೀಡಲು ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ (ಪ್ರತಿಯನ್ನು ಲಗತ್ತಿಸಿದೆ). ಕಂದಾಯ ಇಲಾಖೆಯು ಶ್ರೀ ಕಳಸೇಶ್ವರ ಸ್ವಾಮಿ ಇನಾಂ ಜಮೀನು ಒತ್ತವರಿ ಪ್ರಕರಣವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ ಜಿಲ್ಲಾಧಿಕಾರಿಗಳು ಸಲ್ಲಿಸಿರುವ ವರದಿ ಕುರಿತು ನಿಯಮಾನುಸಾರ ಮರು ಪರಿಶೀಲಿಸಿ ಸೂಕ್ತ ನಿರ್ಧಾರ ಮತ್ತು ಅಭಿಪ್ರಾಯೊಂದಿಗೆ ಸರ್ಕಾರಕ್ಕೆ ಮರು ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿ ಜಿಲ್ಲಾಧಿಕಾರಿ, ಚಿಕ್ಕಮಗಳೂರು ಇವರು ಹಿಂತಿರುಗಿಸಿರುತ್ತದೆ.

ಪ್ರಸ್ತುತ ಪ್ರಕರಣದಲ್ಲಿ, ಶ್ರೀ ಕಳಶೇಶ್ವರ ಸ್ವಾಮಿ ಇನಾಮ್ ಭೂಮಿಯು ಮಹಾರಾಜರ ಆದೇಶದಂತೆ ಒಟ್ಟು 6777 ಎಕರೆ ಪ್ರದೇಶವು ಅರಣ್ಯ ಭೂಮಿಯಾಗಿರುತ್ತದೆ. ಸದರಿ ಭೂಮಿಯಲ್ಲಿ ಪ್ರಸ್ತುತ 635 ಪ್ರಕರಣಗಳಿಂದ 2105.24 ಎಕರೆ ಪ್ರದೇಶವು ಒತ್ತುವರಿಯಾಗಿದ್ದು, ಈ ಸಂಬಂಧ ಅರಣ್ಯ ಸಂರಕ್ಷಣಾ ಕಾಯ್ದೆ, 1980 ರಡಿ ಅಗತ್ಯ ಕ್ರಮಕೈಗೊಳ್ಳಲು ಪರಿಹಾರತ್ಮಕವಾಗಿ ಅರಣ್ಯ ಇಲಾಖೆಗೆ 1091.13 ಎಕರೆ ಬದಲಿ ಜಮೀನನ್ನು ಪರಿಹಾರತ್ಮಕ ಅರಣ್ಯೀಕರಣಕ್ಕಾಗಿ ಹಸ್ತಾಂತರಿಸಿದಲ್ಲಿ, ಮುಂದಿನ ಕ್ರಮವಹಿಸಲಾಗುವುದು.

**ಸಂಖ್ಯೆ: ಎಫ್ಇಇ 215 ಎಫ್ಎಫ್ಎಲ್ 2024**

**(ಈಶ್ವರ ಬಿ ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ
ಸಚಿವರು